**<u>2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ</u>**

ಸಿ.ಸಿ. ನಂಬ್ರಃ **538/2018**
ಸಿ.ಡಬ್ಲ್ಯೂ- **14**
ಪಿ.ಡಬ್ಲ್ಯೂ- **12**

| | | |
|---|---|---|
| ಸಾಕ್ಷಿದಾರರ ಹೆಸರು | : | ಶಿವಕುಮಾರ್ |
| ತಂದೆಯ ಹೆಸರು | : | ಚಂದ್ರಶೇಖರ |
| ಪ್ರಾಯ | : | 66 ವರ್ಷ |
| ಉದ್ಯೋಗ | : | ನಿವೃತ್ತ ಪಿ.ಎಸ್.ಐ. |
| ವಾಸ | : | ಪಾಂಡೇಶ್ವರ |

ದಿನಾಂಕಃ 06-05-2026 ರಂದು ಸಾಕ್ಷಿಗೆ ಪ್ರಮಾಣವಚನ ಭೋಧಿಸಲಾಯಿತು

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಹಕರಿಂದ</u>

ನಾನು 2018 ರಿಂದ 2022 ರವರೆಗೆ ಕೊಲ್ಲೂರು ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನಾನು ಈ ಪ್ರಕರಣದಲ್ಲಿ ದಿನಾಂಕಃ 03-05-2018 ರಂದು ಠಾಣಾ ಅಕ್ರ 10/2018 ರಲ್ಲಿ ಕಡತವನ್ನು ಚಾಸಾ 13 ರವರಿಂದ ಪಡೆದು ತನಿಖೆ ಮುಂದುವರಿಸಿ ಮಾನ್ಯ ನ್ಯಾಯಲಯಕ್ಕೆ ಚಾಸಾ 1 ರವರ ಹೇಳಿಕೆಯನ್ನು ಕಲಂ 164 ಅಡಿಯಲ್ಲಿ ದಾಖಲಿಸಲು ಮನವಿ ಸಲ್ಲಿಸಿರುತ್ತೇನೆ. ದಿನಾಂಕ 16-05-2018 ರಂದು ಆರೋಪಿತ ನಿರಿಕ್ಷಣಾ ಜಾಮೀನು ಪಡೆದುಕೊಂಡು ಬಂದಿದ್ದು, ಆರೋಪಿಯನ್ನು ದಸ್ತಗಿರಿ ಮಾಡಿ ದಸ್ತಗಿರಿ ನಿಯಮ ಪಾಲಿಸಿ ಯೋಗ್ಯ ಜಾಮೀನಿನ ಮೇಲೆ ಬಿಟ್ಟಿರುತ್ತೇನೆ. ಆರೋಪಿಯ ದಸ್ತಗಿರಿ ಮಹಜರು ಹಾಗೂ ಸ್ವತ್ತು ಮಹಜರು ಮಾಡಿ ಪ್ರಕರಣಕ್ಕೆ ಸಂಬಂಧಪಿಟ್ಟ ಆಟೋ ರಿಕ್ಷಾ ಸಂಖ್ಯೆ ಕೆ ಎ 20 ಡಿ 6021 ನ್ನು ಪಂಚರ ಸಮಕ್ಷಮ ಸ್ವಾಧಿನ ಪಡಿಸಿಕೊಂಡಿರುತ್ತೇನೆ. ಸದರಿ ದಾಖಲೆ ಈಗಾಗಲೇ ನಿ.ಪಿ.6 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.6(ಬಿ) ಎಂದು ಗುರುತಿಸಲಾಯಿತು. ಸ್ವತ್ತು ಪಟ್ಟಿಯನ್ನು 16/2018 ರಂತೆ ಸಲ್ಲಿಸಿರುತ್ತೇನೆ.

ದಿನಾಂಕ 17-05-2018 ರಂದು ಮಾನ್ಯ ನ್ಯಾಯಲಯದ ಆದೇಶದಂತೆ ಆಟೋ ರಿಕ್ಷಾ ಸಂಖ್ಯೆ ಕೆ ಎ 20 ಡಿ 6021 ನ್ನು ಆರೋಪಿಗೆ ರಶೀದಿ ಮುಖೇನ ಬಿಡುಗಡೆ ಗೊಳಿಸಿ ಅದರ ಬಾವಚಿತ್ರವನ್ನು ತೆಗೆಸಿರುತ್ತೇನೆ.

ಸಾಕ್ಷಿ ಈಗ ಬಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.5 ಎಂದು ಗುರುತಿಸಲಾಗಿರುತ್ತದೆ. ದಿನಾಂಕ 31-05-2018 ರಂದು ಮಾನ್ಯ ನ್ಯಾಯಲಯದಿಂದ 164 ಸ್ಟೇಟ್ ಮೆಂಟ್ ಪಡೆದಿರುತ್ತೇನೆ. ಸದರಿ ದಾಖಲೆ ನಿ.ಪಿ.3 ಎಂದು ಗುರುತಿಸಲಾಗಿರುತ್ತದೆ.

ದಿನಾಂಕ 11-06-2018 ರಂದು ಶ್ರೀದೇವಿ ಆಸ್ಪತ್ರೆಯಿಂದ ಪಿರ್ಯಾದಿದಾರರ ಗಾಯದ ದೃಡಪತ್ರನವನ್ನು ಪಡೆದಿರುತ್ತೇನೆ. ಸದರಿ ದಾಖಲೆ ಈಗಾಗಲೇ ನಿ.ಪಿ.7 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.7(ಬಿ) ಎಂದು ಗುರುತಿಸಲಾಯಿತು. ದಿನಾಂಕ 11-06-2018 ರಂದು ಮಾನ್ಯ ನ್ಯಾಯಲಯಕ್ಕೆ ಆರೋಪಿಯ ವಿರುದ್ದ ದೋಷರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ.

<u>ಪಾಟಿ ಸವಾಲುಃ ಆರೋಪಿತರ ಪರ ಶ್ರೀ ಕೆ ಪಿ ಎಸ್ ವಕೀಲರಿಂದ</u>

1. ನನ್ನ ತನಿಖೆ ಸಮಯದಲ್ಲಿ ಪ್ರಥಮ ವರ್ತಮಾನ ವರದಿ ಪರಿಶೀಲಿಸಿರುತ್ತೇನೆ. ಘಟನೆ ಆದ 3 ದಿನದ ನಂತರ ದೂರು ನೀಡಿರುತ್ತಾರೆ ಎಂದರೆ ಸರಿ. ತನಿಖೆ ಕಾಲದಲ್ಲಿ 3 ದಿನ ತಡವಾಗಿ ದೂರು ದಾಖಲಿಸಿದ್ದಕ್ಕೆ ತನಿಖೆ ಮಾಡಿರುತ್ತೇನೆ. ನಾನು ಮಾಡಿದ ತನಿಖೆ ಹಾಗೂ ಸಾಕ್ಷಿದಾರರು ಹೇಳಿದ ಹೇಳಿಕೆಯಲ್ಲಿ ಸದರಿ ವಿಳಂಬದ ಬಗ್ಗೆ ಕಂಡು ಬರುವುದಿಲ್ಲ ಎಂದರೆ ಸರಿ. ದಿನಾಂಕ 16-05-2018 ರಂದು ಆರೋಪಿತ ನನ್ನ ಮುಂದೆ ಆಟೋ ರಿಕ್ಷಾವನ್ನು ಹಾಜರು ಪಡಿಸಿದ್ದು ಇಲ್ಲ, ನಾನು ಅದನ್ನು ಪಂಚರ ಸಮಕ್ಷಮ ಜಪ್ತಿ ಪಡಿಸಿದ್ದು ಇಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ದಿನ, ಸ್ಥಳ ಹಾಗೂ ಸಮಯದಂದು ದಸ್ತಗಿರಿ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತ ಪಿರ್ಯಾದಿಯ ಸ್ಥಳಕ್ಕೆ ಅಕ್ರಮ ಪ್ರವೇಶ ಮಾಡಿದ್ದು ಇಲ್ಲ ಹಾಗೂ ಹಲ್ಲೆ ಮಾಡಿದ್ದು ಇಲ್ಲ, ಮಾನ ಹಾನ ಮಾಡಿದ್ದು ಇಲ್ಲ ಹಾಗೂ ಕೊಲೆ ಬೆದರಿಕೆ ಹಾಕಿದ್ದು ಇಲ್ಲ ಎಂದರೆ ಸರಿಯಲ್ಲ. ನಾನು ಸರಿಯಾಗಿ ತನಿಖೆ ನಡೆಸದೇ ಯಾವುದೇ ಸಾಕ್ಷ್ಯಧಾರ ಇಲ್ಲದೇ ಇದ್ದರೂ ಸಹ ಆರೋಪಿಯ ವಿರುದ್ದ ಸುಳ್ಳು ದೋಷರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು**
**ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ (C/c)**